


# ಮನವೆಂಬ ಚಿಟ್ಟೆಯೂ ಬದುಕೆಂಬ ಹೂದೋಟವೂ

**ಸಣ್ಣ ಸಂಗತಿಯೊಂದರ ಮೂಲಕವೇ ಬದುಕಿನ ಗಾಢವಾದ ಸತ್ಯವೊಂದು ಹೊಳೆದುಬಿಡುವ ಕ್ಷಣಗಳನ್ನು ಈ ಕಿರುಚಿತ್ರ ಬಲು ಆಪ್ತವಾಗಿ, ನವಿರಾಗಿ ಸೆರೆಹಿಡಿಯುತ್ತದೆ.**

■ ಗೌರಿ

ಬದುಕಿನ ಕುರಿತಾದ ದೊಡ್ಡ ದೊಡ್ಡ ಸತ್ಯಗಳು ಕಾಣಿಸಿಕೊಳ್ಳುವುದು ದಿನನಿತ್ಯದ ಸಣ್ಣ ಸಣ್ಣ ಸಂಗತಿಗಳ ಮೂಲಕವೇ. ಮತ್ತು ಅಂಥ ಸಣ್ಣ ಸಣ್ಣ ಅರಿವಿನ ದೀಪಗಳೇ ನಮ್ಮ ಬದುಕನ್ನು ಸಿಂಗರಿಸುವುದು; ಮುನ್ನಡೆಸುವುದು. ಸೀಮಾ ದೇಸಾಯಿ ನಿರ್ದೇಶನದ 'ಟಿಂಡಿ' ಎಂಬ ಕಿರುಚಿತ್ರವೂ ಇಂಥ ಸಣ್ಣದೊಂದು ಅರಿವಿನ ದೀಪವನ್ನು ಸೆರೆಹಿಡಿಯುವ ಪ್ರಯತ್ನ.

**ಹೆಸರು:** ಟಿಂಡಿ
**ನಿರ್ದೇಶನ:** ಸೀಮಾ ದೇಸಾಯಿ
**ಸಂಗೀತ:** ಸೌರಭ್ ಮತ್ತು ದುರ್ಗೇಶ್
**ಧ್ವನಿ ವಿನ್ಯಾಸ:** ಶಂತನು ಆಕೇರ್‌ಖರ್, ದಿನೇಶ್ ಉಚ್ಚಿಲ್
**ಸಂಕಲನ:** ಪಾರ್ಥ ವೈ ಭಟ್
**ತಾರಾಗಣ:** ಆದಾ ಶರ್ಮ, ರಾಜೇಶ್ ಶರ್ಮ, ಅಶ್ವಿನಿ ಕಾಲ್ಸೇಕರ್



ಇದು ಮಧ್ಯವಯಸ್ಕನೊಬ್ಬನ ಬದುಕಿನಲ್ಲಿ ನಡೆಯುವ ಘಟನೆ. ತನ್ನ ಪ್ರಾಮಾಣಿಕತೆಯಿಂದ ಸರ್ಕಾರಿ ನೌಕರಿಯಲ್ಲಿದ್ದೂ ಬಡತನವನ್ನೇ ಬದುಕಿಗೆ ಮೆತ್ತಿಕೊಂಡು ಜೀವನ ಸಾಗಿಸುತ್ತಿರುವ ವ್ಯಕ್ತಿ ಆತ. ಅವನ ಹೆಂಡತಿಯೋ, ಮನೆಯ ಪರಿಸ್ಥಿತಿ, ಅವನ ನಿರ್ಲಕ್ಷ್ಯಗುಣ ಎಲ್ಲದರ ಬಗ್ಗೆಯೂ ಗೊಣಗಿಕೊಳ್ಳುತ್ತಲೇ ಕುಟುಂಬದ ಸೂತ್ರ ಹರಿಯದ ಹಾಗೆ ಕಾಳಜಿಯಿಂದ ಕಾಪಿಡುವವಳು. ಎಷ್ಟೋ ವರ್ಷದ ಯಾಂತ್ರಿಕ ಸಂಸಾರದಿಂದ ಅವನಲ್ಲಿ ಹೆಂಡತಿ ಎನ್ನುವುದು ಮನೆಯ ಇನ್ನೊಂದು ವಸ್ತುವಿನ ಹಾಗೆಯೇ ಆಗಿಬಿಟ್ಟಿದೆ; ಅವನಿಗೂ ಅರಿವಿಲ್ಲದೆ.

ಇಂಥ ಸಮಯದಲ್ಲಿ ಅವನ ಏಕತಾನ ಬದುಕಿನಲ್ಲಿ ಹೊಸದೊಂದು ತಾನ ರಿಂಗಣಿಸುತ್ತದೆ. ಆ ರಿಂಗಣದ ಮೂಲ ಟಿಂಡಿ ಎಂಬ ಡೇಟಿಂಗ್ ಆ್ಯಪ್. ಆಫೀಸಿನಲ್ಲಿ ಟಿಂಡಿ ಆ್ಯಪ್ ಬಳಸುತ್ತ ಯಾವುದಾದರೂ ಹುಡುಗಿ ಜೊತೆ ಮಜಾ ಮಾಡಲು ಅವಕಾಶ ಸಿಗುತ್ತದೆಯೇ ಎಂದು ಹೊಂಚು ಹಾಕುತ್ತಿರುವ ಸಹೋದ್ಯೋಗಿಯೊಬ್ಬ ಇವನಿಗೂ ಆ ಆ್ಯಪ್ ಪರಿಚಯಿಸುತ್ತಾನೆ. ರೈಟ್ ಸ್ವೈಪ್ ಮಾಡುತ್ತಲೇ ಹೋದ ಅವನಿಗೆ ಒಬ್ಬಳು ಸ್ವಪ್ನಕನ್ನಿಕೆಯಂಥ ಸುಂದರ ಹುಡುಗಿಯಿಂದ ಒಪ್ಪಿಗೆ ಸೂಚನೆಯೂ ಸಿಗುತ್ತದೆ! ಇದು ಅವನ ಬದುಕಿನ ಲಯವನ್ನೇ ಬದಲಿಸಿಬಿಡುತ್ತದೆ. ನಿಂತ ನೀರಂತಾಗಿದ್ದ ಅವನ ಜಗತ್ತು ಒಡ್ಡೊಡೆದ ಕೆರೆಯ ಹಾಗೆ ಹರಿಯಲಾರಂಭಿಸುತ್ತದೆ. ಆ ಹುಡುಗಿಯ ಭೇಟಿ, ಅವಳ ಜೊತೆಗಿನ ಮೊಬೈಲ್ ಸಂಭಾಷಣೆ ಎಲ್ಲವೂ ಅವನಿಗೆ ಮೇಲ್ನೋಟಕ್ಕೆ ಉಕ್ಕೇರುವ ಉತ್ಸಾಹದಂತೇ ಕಾಣುವ ಕೃತಕ ಉಮೇದಿಯನ್ನು ಕೊಡುತ್ತಿರುತ್ತದೆ. ಅದರ ಜೊತೆಜೊತೆಗೇ ತನ್ನನ್ನು ಪೂರ್ತಿಯಾಗಿ ನಂಬಿರುವ, ಮುಗ್ಧ ಹೆಂಡತಿಗೆ ಮೋಸ ಮಾಡುತ್ತಿದ್ದೇನೆಂಬ ಪಾಪಪ್ರಜ್ಞೆಯನ್ನೂ ಬೆಳೆಸುತ್ತಾ ಹೋಗುತ್ತದೆ.

ಒಂದು ಘಟ್ಟದಲ್ಲಿ ಈ ಸಂಬಂಧದ ಮೂಲದಲ್ಲಿ ಇರುವುದು ನಿಜವಾದ ಆಕರ್ಷಣೆಯಲ್ಲ, ಅದು ಕೃತಕವಾದದ್ದು; ಇಬ್ಬರ ಆ ಕ್ಷಣದ ಅಗತ್ಯಗಳನ್ನು ಪೂರೈಸಿಕೊಳ್ಳಲಿಕ್ಕಾಗಿಯೇ ಹುಟ್ಟಿಕೊಂಡಿದ್ದು ಎಂಬುದು ತಿಳಿಯುತ್ತದೆ. ಆ ತಿಳಿವಳಿಕೆಯೇ ಅವನಿಗೆ ತನ್ನ ಹೆಂಡತಿಯನ್ನು ಹೊಸ ಕಣ್ಣುಗಳಿಂದ ನೋಡುವ ದೃಷ್ಟಿಯನ್ನು ಕೊಡುತ್ತದೆ. ಹಾಗೆಯೇ ಅವನ ಹೆಂಡತಿಯೂ (ಅವಳಿಗೆ ಇವೆಲ್ಲವೂ ಗೊತ್ತಿಲ್ಲದೇ ಹೋದರೂ) ಅವನನ್ನೂ ಹೊಸತಾಗಿ ನೋಡುವ ಹಾಗೆ ಮಾಡುತ್ತದೆ.

ಕಿರುಚಿತ್ರದ ಚೌಕಟ್ಟಿಗೆ ಹೊಂದುವಂಥ ಸಣ್ಣ ಫ್ಲಾಷ್ ಒಂದನ್ನು ತೆಗೆದುಕೊಂಡು ಅದನ್ನು ನಿರ್ದೇಶಕಿ ನಿರ್ವಹಿಸಿರುವ ರೀತಿ ಅಚ್ಚುಕಟ್ಟಾಗಿದೆ. ನವಿರಾದ ಹಾಸ್ಯವನ್ನೂ, ಅಷ್ಟೇ ಸವಿರಾದ ಭಾವುಕತೆಯನ್ನೂ ಉಕ್ಕಿಸುವ ಈ ಚಿತ್ರ ಎಲ್ಲಿಯೂ ಅತಿರೇಕದ ಗಡಿ ಮುಟ್ಟುವುದಿಲ್ಲ. ಸರಳವಾದ ಸಂಗತಿಯನ್ನು ಎಲ್ಲರ ಬದುಕನ್ನೂ ನೋಡಿಕೊಳ್ಳುವ ಹಾಗೆ, ಜನಪ್ರಿಯ ಮಾದರಿಯಲ್ಲಿಯೇ ಕಾಣಿಸುವುದು ಸುಲಭ ಅಲ್ಲ. ಈ ಕಿರುಚಿತ್ರ ಆ ನಿಟ್ಟಿನಲ್ಲಿ ಯಶಸ್ವಿಯಾಗಿದೆ ಎಂದೇ ಹೇಳಬಹುದು.

ಅದಾ ಶರ್ಮ ಮುಖದಲ್ಲಿ ಕಾಣಿಸುವಂಥ ಮುದ್ದುತನವನ್ನು ನಟನೆಯಲ್ಲಿಯೂ ತುಳುಕಿಸಿದ್ದಾರೆ. ರಾಜೇಶ್ ಶರ್ಮ ಕೂಡ ಪ್ರಬುದ್ಧ ಅಭಿನಯದಿಂದ ಗಮನಸೆಳೆಯುತ್ತಾರೆ. ಗಂಡನನ್ನೇ ಜಗತ್ತು ಎಂದು ನಂಬಿರುವ ಗೃಹಿಣಿಯ ಪಾತ್ರದಲ್ಲಿ ಅಶ್ವಿನಿ ಕಾಲ್ಸೇಕರ್ ಕೂಡ ಇಷ್ಟವಾಗುತ್ತಾರೆ.

ಒಂದು ಭಾವುಕ ಆವರಣವನ್ನು ನಿರ್ಮಿಸಿ ಪ್ರೇಕ್ಷಕನನ್ನು ಅದರಲ್ಲಿ ಮುಳುಗಿಸಿ ಉಸಿರುಗಟ್ಟಿಸದೆ, ಅದರ ತುಂತುರುವನ್ನು ಆಸ್ವಾದಿಸುವಂತೆ ಮಾಡುವುದು ಈ ಕಿರುಚಿತ್ರದ ಹೆಚ್ಚುಗಾರಿಕೆ.

ಈ ಕಿರುಚಿತ್ರ ವೀಕ್ಷಣೆಗೆ wwww ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.